ನಾನು ಒಪ್ಪಿಕೊಳ್ಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಕೂಡ ಬಂದಿದ್ದಾರೆ. ಆದರೆ ಯಾರೂ ಕೂಡ ನಮ್ಮ ಸ್ವಾಭಿಮಾನವನ್ನು ಕೆಣಕಿದರೆ ಅದು ಸರಿ ಹೋಗುವುದಿಲ್ಲ, ಅದಕ್ಕೆ ನಾವು ಸುಮ್ಮನೆ ಕೂಡುವುದಕ್ಕೆ ಬಂದಿಲ್ಲ. ದಯವಿಟ್ಟು ಇದಕ್ಕೆ ಮುಕ್ತಿ ಮಾಡಿಸಿ, ಅವರು ವಿಷಾದವೆಂದು ಹೇಳಿಕೊಂಡಿದ್ದಾರೆ, ನಾನು ಅದನ್ನು ಮುಂದುವರೆಸುವುದಿಲ್ಲ.

ಅಧ್ಯಕ್ಷರು: ಈ ವಿಷಯವನ್ನು ಇಲ್ಲಿಗೆ ಮುಕ್ತಾಯಗೊಳಿಸೋಣ. ಮಾನ್ಯ ಬಾಲಕೃಷ್ಣರವರೆ ಒಂದು ನಿಮಿಷ. ಪತ್ರಕಾ ಮಿತ್ರರು ಸದನದ ನಡವಳಿಕೆಯಲ್ಲಿ ಕಡತದಿಂದ ತೆಗೆದು ಹಾಕಿದ ಪದಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಿರುವುದನ್ನು ನಾನು ಗಮನಿಸಿದ್ದೇನೆ. ಈ ರೀತಿ ಇನ್ನು ಮುಂದೆ ಆಗದಂತೆ ಪತ್ರಿಕೆಯವರು ಹಾಗೂ ಪತ್ರಿಕಾ ಮಾಧ್ಯಮದವರು ಮತ್ತು ಇತರರು ಎಚ್ಚರಿಕೆಯನ್ನು ವಹಿಸಬೇಕೆಂದು ಕೋರುತ್ತೇನೆ. ಅಲ್ಲದೆ, ಮಾನ್ಯ ಸದಸ್ಯರುಗಳು ಸದನದ ಬಾವಿಗೆ ಬಂದು ಪ್ರತಿಭಟಿಸುತ್ತಿರುವ ಸಂದರ್ಭದಲ್ಲಿ ಅವರು ಉಚ್ಚರಿಸಿದ ಯಾವುದೇ ಪದಗಳು ಕಡತಕ್ಕೆ ಸೇರದೇ ಇರುವುದರಿಂದ ಅವುಗಳನ್ನೂ ಕೂಡ ಪ್ರಕಟಿಸಬಾರದೆಂದು ನಾನು ಈ ಮೂಲಕ ಕೋರುತ್ತೇನೆ.

3.ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ಭಾರತ ಸಂವಿಧಾನದ 15(2)ನೇ ಅನುಚ್ಛೇದದ ಮೇರೆಗೆ ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕ ಪರಿಶೋಧಕರು 31ನೇ ಮಾರ್ಚ್ 2007ಕ್ಕೆ ಕೊನೆಗೊಂಡ ವರ್ಷಕ್ಕೆ ನೀಡಿರುವ ಪಂಚಾಯತ್ ರಾಜ್ ಸಂಸ್ಥೆಗಳ ಲೆಕ್ಕ ಪರಿಶೋಧನಾ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು: ಮಂಡಿಸಲಾಯಿತು.

ಕಾರ್ಯದರ್ಶಿ (ಕರ್ನಾಟಕ ವಿಧಾನಸಭೆ): ಮಾನ್ಯ ಅಧ್ಯಕ್ಷರೆ, 12ನೇ ವಿಧಾನಸಭೆಯ ಸಾರ್ವಜನಿಕ ಉದ್ದಿಮೆಗಳ ಸಮಿತಿಯ 116ನೇ ವರದಿಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು: ಮಂಡಿಸಲಾಯಿತು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ(ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು): ಮಾನ್ಯ ಅಧ್ಯಕ್ಷರೆ, ನನ್ನ ಹೆಸರಿನ ಮುಂದಿರುವ ಈ ಕೆಳಕಂಡ ಕಾಗದ ಪತ್ರಗಳನ್ನು ಸಭೆಯ ಮುಂದಿಡುತ್ತೇನೆ.

1983ರ ಕರ್ನಾಟಕ ಶಿಕ್ಷಣ ಅಧಿನಿಯಮ (1995 ಕರ್ನಾಟಕ ಅಧಿನಿಯಮ-1) 145 (4)ರ ಪ್ರಕರಣದ ಮೇರೆಗೆ:

1. 1999ರ ಕರ್ನಾಟಕ ಶಿಕ್ಷಣ ಸಂಸ್ಥೆಗಳು (ಖಾಸಗಿ ಅನುದಾನಿತ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಂಸ್ಥೆಗಳ ನೌಕರರ ನೇಮಕಾತಿ ಮತ್ತು ನಿಬಂಧನೆಗಳು ಮತ್ತು ಸೇವಾ ಷರತ್ತುಗಳು) ನಿಯಮಾವಳಿಗಳಲ್ಲಿ ಅನುದಾನಿತ ಖಾಸಗಿ ಪ್ರೌಢ ಶಾಲೆಗಳಲ್ಲಿನ ಸಹಾಯಕ ಶಿಕ್ಷಕರ ಗ್ರೇಡ್–2 ಹುದ್ದೆಗಳಿಗೆ ಅನುದಾನಿತ ಖಾಸಗಿ ಪ್ರಾಥಮಿಕ ಶಾಲೆಗಳಲ್ಲಿನ ಶಿಕ್ಷಕರಿಗೆ ಶೇಕಡಾ 50 ರಷ್ಟು ಬಡ್ತಿ ನೀಡುವ ಮೂಲಕ ಭರ್ತಿ ಮಾಡುವ ಅವಕಾಶವನ್ನು ಕಲ್ಪಿಸಿ ಅನುಬಂಧ–3ಕ್ಕೆ ತಿದ್ದುಪಡಿ ಮಾಡಿರುವ ಕುರಿತು ದಿನಾಂಕ 27–12–2007ರಂದು ಹೊರಡಿಸಲಾದ ಇಡಿ/146/ಎಸ್ ಎಲ್‌ಬಿ/2007ನೇ ಸಂಖ್ಯೆಯ ಅಧಿಸೂಚನೆ.

2. 1999ರ ಕರ್ನಾಟಕ ಶಿಕ್ಷಣ ಸಂಸ್ಥೆಗಳು (ಖಾಸಗಿ ಅನುದಾನಿತ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಂಸ್ಥೆಗಳ ನೌಕರರ ನೇಮಕಾತಿ ಮತ್ತು ನಿಬಂಧನೆಗಳು ಮತ್ತು ಸೇವಾ ಷರತ್ತುಗಳು) ನಿಯಮಾವಳಿಗಳಲ್ಲಿ ಅನುದಾನಿತ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿನ ನೌಕರರ ವಿರುದ್ಧ ಕೈಗೊಳ್ಳಲಾಗುವ ಶಿಸ್ತುಕ್ರಮಗಳಿಗೆ ಸಂಬಂಧಿಸಿದಂತೆ ಅನುಸರಿಸಲಾಗುವ ಕಾರ್ಯವಿಧಾನಗಳನ್ನು ಉಪಬಂಧಿಸಿರುವ ನಿಯಮ 20 (1) (ಬಿ) ಯ ಜೊತೆಗೆ (ಸಿ) ಯನ್ನು ಸೇರಿಸಿ ಹಾಗೂ ನಿಯಮ 21 (2) ನ್ನು ಬದಲಿಯಾಗಿ ಸೇರ್ಪಡೆಗೊಳಿಸಿ ದಿನಾಂಕ 07–01–2008 ರಂದು ಹೊರಡಿಸಲಾದ ಇಡಿ/53/ಎಸ್‌ಎಲ್‌ಬಿ/2007ನೇ ಸಂಖ್ಯೆಯ ಅಧಿಸೂಚನೆಗಳನ್ನು ಮಂಡಿಸುತ್ತೇನೆ.

ಅಧ್ಯಕ್ಷರು: ಮಂಡಿಸಲಾಯಿತು.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ತಾವು ರೂಲಿಂಗ್‌ನ್ನು ಕೊಡುತ್ತೇನೆಂದು ಹೇಳಿದ್ದೀರಿ. ನಿನ್ನೆ ಸಾಯಂಕಾಲವೂ ಸಹ ಕೊಡಲಿಲ್ಲ.

ಅಧ್ಯಕ್ಷರು: ರೆಡಿ ಇದೆ. ನಿನ್ನೆಯ ದಿನ ಗದ್ದಲವಾಯಿತಲ್ಲ? ರೆಡಿ ಇದೆ.ಕೊಡುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ತಾವು ರೂಲಿಂಗ್ ಕೊಟ್ಟರೆ, ಮುಂದೆ ಯಾವ ರೂಲ್‌ನಲ್ಲಿ ನೀವು ಚರ್ಚೆಯನ್ನು ಮಾಡುವುದಕ್ಕೆ ಅವಕಾಶವನ್ನು ಕೊಡುತ್ತೀರೆಂದು ಗೊತ್ತಾಗುತ್ತದೆ.

4.ಅಧ್ಯಕ್ಷರ ತೀರ್ಪು

ವಿಷಯ: ದಿನಾಂಕ 29–07–2008ರಂದು ವಿರೋಧ ಪಕ್ಷದ ನಾಯಕರು ಶ್ರೀಮತಿ ಪದ್ಮಪ್ರಿಯ ಅವರ ನಿಧನದ ಬಗ್ಗೆ ಸಲ್ಲಿಸಿದ್ದ ನಿಲುವಳಿ ಸೂಚನೆ ಬಗ್ಗೆ.

ಅಧ್ಯಕ್ಷರು: ರೂಲಿಂಗ್‌ನ್ನು ಕೊಟ್ಟುಬಿಡುತ್ತೇನೆ. ದಿನಾಂಕ: 29–07–2008 ರಂದು ವಿರೋಧ ಪಕ್ಷದ ನಾಯಕರು ಸಲ್ಲಿಸಿರುವ ನಿಲುವಳಿ ಸೂಚನೆ ಬಗ್ಗೆ ವಿಧಾನಸಭಾಧ್ಯಕ್ಷರ ತೀರ್ಪು.